# ಮೇರು ಸಿಂಚನ

## ಡಾ. ಎಸ್. ಟಿ. ಮೇರವಾಡೆ ಅವರ
## ಅಭಿನಂದನ ಗ್ರಂಥ





ಪ್ರಧಾನ ಸಂಪಾದಕರು
- ಪ್ರೊ. ಟಿ. ವ್ಹಿ. ಕಟ್ಟೀಮನಿ

ಸಂಪಾದಕರು
- ಪ್ರೊ. ಬಿ. ಬಿ. ಡೆಂಗನವರ

Scanned with OKEN Scanner

**Title-** Gnyanpeeth Awardees of Hindi Literature: An Overview
- Dr. Thippeswamy D.S.

# ಹಿಂದಿ ಸಾಹಿತ್ಯದ ಜ್ಞಾನಪೀಠ ಪುರಸ್ಕೃತರು: ಒಂದು ಅವಲೋಕನ

• ಡಾ. ತಿಪ್ಪೇಸ್ವಾಮಿ ಡಿ. ಎಸ್.

ಡಾ. ಎಸ್. ಟಿ. ಮೇರವಾಡೆ ಅವರು ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮನ್ನು ಗುರುತಿಸಿಕೊಂಡ ಹಿಂದಿ ಮತ್ತು ಕನ್ನಡದ ಒಬ್ಬ ಮಹತ್ವದ ಲೇಖಕರು. ಕವಿ, ಕಥೆಗಾರ, ವಿಮರ್ಶಕ, ಅನುವಾದಕ ಹಾಗೂ ವಾಗ್ಮಿ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಅವರು ತಮ್ಮ ಸೃಜನಶೀಲ ಪ್ರತಿಭೆಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ಕ್ಷೇತ್ರಗಳಲ್ಲಿಯೂ ಅವರದು ಸಮಾನ ಪ್ರೀತಿ, ಸಮಾನ ಪರಿಶ್ರಮ ಇವರು ಸ್ವಪ್ರಯತ್ನದಿಂದ ಗಳಿಸಿದ ಜ್ಞಾನ ಅನುಭವ ಅನಂತ. ಅದರಿಂದ ಪಡೆದ ಪ್ರಸಿದ್ಧಿ ಏರಿದ ಎತ್ತರ ಅನನ್ಯ.

ಬಹುಭಾಷೆಗಳಲ್ಲಿ ಪ್ರಭುತ್ವವನ್ನು ಸಾಧಿಸಿದ ಡಾ. ಎಸ್. ಟಿ. ಮೇರವಾಡೆ ಅವರು ಹಿಂದಿ, ಕನ್ನಡ, ಭಾಷೆಗಳಲ್ಲಿನ ಉತ್ತಮ ಕೃತಿಗಳನ್ನು ಅಧ್ಯಯನ ಮಾಡಿ ತಮ್ಮ ಅನುಭವದ ದಿಗಂತವನ್ನು ವಿಸ್ತರಿಸಿಕೊಂಡಿದ್ದಾರೆ. ಅಧ್ಯಯನ ಹಾಗೂ ಬರವಣಿಗೆಗಳನ್ನು ತಮ್ಮ ಬದುಕಿನ ಬಹುಮುಖ್ಯ ಮಣಿಹವನ್ನಾಗಿ ಮಾಡಿಕೊಂಡ ಅವರು ಅವುಗಳನ್ನು ಉಸಿರಾಡಿಸುವಷ್ಟೇ ಸಹಜ ಕ್ರಿಯೆಗಳೆಂದು ನಂಬಿ, ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ಅನೇಕ ದೇಶಗಳನ್ನು ಸುತ್ತಿದ, ಬೇರೆ ಬೇರೆ ದೇಶ ಭಾಷೆಗಳ ಕವಿ ಸಾಹಿತಿಗಳನ್ನು ಸಂದರ್ಶಿಸಿದ, ಹಲವಾರು ರಾಷ್ಟ್ರೀಯ, ಅಂತರಾಷ್ಟ್ರೀಯ ಕವಿಗೋಷ್ಠಿ, ಸಾಹಿತ್ಯ ಸಮ್ಮೇಲನಗಳಲ್ಲಿ ಭಾಗವಹಿಸಿದ ವಿಶೇಷತೆ ಇವರದು. ಬದುಕು-ದೇಶ-ಭಾಷೆ-ಕಲೆ-ಸಾಹಿತ್ಯ-ಸಭ್ಯತೆಗಳನ್ನು ಗಾಢವಾಗಿ ಪ್ರೀತಿಸುವ ಇವರು ಉನ್ನತ ಮಾನವ ಪ್ರೇಮಿಗಳು. ಇವರದು ಸದಾ ವಿಶ್ವಪ್ರೇಮ, ವಿಶ್ವಕಲ್ಯಾಣಕ್ಕಾಗಿ ತುಡಿಯುವ ಮನಸ್ಸು, ಸದಭಿರುಚಿ, ಸದ್ವಿಚಾರ, ಸದಾಚಾರ, ಸರಳತೆ, ಸಜ್ಜನಿಕೆಗಳೆಂಬ ಉನ್ನತ ಮೌಲ್ಯಗಳಿಂದ ಸಾಕಾರಗೊಂಡಿರುವ ಸುಸಂಸ್ಕೃತ ವ್ಯಕ್ತಿತ್ವ. ಭಾವೈಕ್ಯತೆ, ರಾಷ್ಟ್ರೀಯತೆ, ಮಾನವೀಯತೆಗಳಿಂದ ಸಮನಿತ್ವಗೊಂಡಿರುವ



Scanned with OKEN Scanner

ಶ್ರೀಮಂತ–ಬಡವನ ಬದುಕು. ಈ ಪ್ರಜ್ಞೆ ಇವರ ಎಲ್ಲ ಕೃತಿಗಳಲ್ಲಿ ಜ್ವಲಂತವಾಗಿ ಮಿಡಿಯುತ್ತದೆ. ಈ ಉಜ್ವಲ ವ್ಯಕ್ತಿತ್ವದ ಸ್ಪರ್ಶ ಇವರ ಎಲ್ಲ ಅಭಿವ್ಯಕ್ತಿಗಳಲ್ಲಿ ಎದ್ದು ಕಾಣುತ್ತದೆ. ಈ ಶ್ರೀಮಂತ–ಬಡತನ ಬದುಕಿನ ಮುದ್ರೆ ಇವರ ಎಲ್ಲ ರಚನೆಗಳ ಮೇಲೆ ಅಚ್ಚೊತ್ತಿದೆ. ಹೀಗಾಗಿ ಇವರ ಯಾವುದೇ ಕೃತಿಗಳನ್ನು ಅವಲೋಕಿಸುವಾಗ ಈ ಹಿನ್ನಲೆ ಅನಿವಾರ್ಯವೆನಿಸುತ್ತದೆ.

ಡಾ. ಎಸ್. ಟಿ. ಮೇರವಾಡೆ ಅವರು ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಹಿಂದಿ–ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಕೊಡುಗೆಯಾಗಿ ಕೊಟ್ಟಿದ್ದಾರೆ. ಅವುಗಳಲ್ಲಿ ಸ್ವತಂತ್ರ ಹಾಗೂ ಅನುವಾದ ಕೃತಿಗಳು ಸಮಾವೇಶಗೊಂಡಿವೆ.

ಅನುವಾದ ಕ್ಷೇತ್ರದಲ್ಲಿ ಡಾ. ಎಸ್. ಟಿ. ಮೇರವಾಡೆ ಅವರದು ಎದ್ದು ಕಾಣುವ ಹೆಸರು. ಹಿಂದಿ ಭಾಷೆಯಿಂದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟವರು ಇನ್ನು ವಿರಳ. ಅನುವಾದಕನಲ್ಲಿರಬೇಕಾದ ಉಭಯ ಭಾಷಾ ಪ್ರಭುತ್ವ, ಉಭಯ ಸಂಸ್ಕೃತಿಗಳ ಅರಿವು, ಮೂಲ ಲೇಖಕನ ಮನಸ್ಸನ್ನು ಹೊಕ್ಕು ನೋಡುವ ಸೂಕ್ಷ್ಮದೃಷ್ಟಿ. ಮೂಲಕೃತಿಯ ಆಶಯಕ್ಕೆ ಚ್ಯುತಿಬರದಂತೆ ನೋಡಿಕೊಳ್ಳುವ ಜಾಣ್ಮೆ – ಈ ಎಲ್ಲ ಅಗತ್ಯಗಳನ್ನು ಕರಗತ ಮಾಡಿಕೊಂಡ ಡಾ. ಎಸ್. ಟಿ. ಮೇರವಾಡೆ ಅವರು ಅನೇಕ ಕವಿತೆ, ಕಥೆ, ನಾಟಕ, ಹಿಂದಿ ಸಾಹಿತ್ಯದ ಜ್ಞಾನಪೀಠ ಪುರಸ್ಕೃತರನ್ನು ಹಿಂದಿ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

ವಿನಮ್ರತೆಯ ಬರಹಗಾರರಾದ ಡಾ. ಎಸ್. ಟಿ. ಮೇರವಾಡೆಯವರು ಈಗಾಗಲೇ ಸಾಕಷ್ಟು ಅನುವಾದ ಕೃತಿಗಳನ್ನು ಹೊರ ತಂದಿದ್ದಾರೆ. ಇದೊಂದು ಹೊಸ ಪ್ರಯೋಗ ಹಿಂದಿ ಜ್ಞಾನಪೀಠ ಪ್ರಶಸ್ತಿ ಪಡೆದ ಕವಿಗಳನ್ನು ಅವರ ಜೀವನ, ಸಾಧನೆ ಕೃತಿಗಳ ಕುರಿತಾದ ಪರಿಚಯವನ್ನೊಳಗೊಂಡ ಅಧ್ಯಯನ ಪೂರ್ಣ, ಔಚಿತ್ಯಪೂರ್ಣವಾದ ಬರಹದೊಂದಿಗೆ ಕೃತಿ ಮೂಡಿ ಬಂದಿರುವುದು. ಹಿಂದಿ ಭಾಷೆಯಲ್ಲಿ ಸಾಹಿತ್ಯ ಕೃಷಿಗೈದು ಭಾರತವನ್ನು ಪ್ರಸಿದ್ಧಿಗೊಳಿಸಿದ ಆ ಮುಖೇನ ತಾವು ಪ್ರಸಿದ್ಧಿಗೇರಿದ ಹನ್ನೊಂದು ಜನ ಜ್ಞಾನಪೀಠ ಪ್ರಶಸ್ತಿ ಪಡೆದ ಹಿಂದಿ ಸಾಹಿತ್ಯ ಮಹಾನ್ ಬರಹಗಾರರನ್ನು ಕನ್ನಡದ ಓದುಗರಿಗೆ ಅರ್ಥಪೂರ್ಣವಾಗಿ ಪರಿಚಯಿಸಿರುವ ಲೇಖಕರ ಉದಾತ್ತ ಉದ್ದೇಶ ಸಂಪೂರ್ಣವಾಗಿ ಫಲಕೊಟ್ಟಿದೆ. ಡಾ. ಎಸ್. ಟಿ. ಮೇರವಾಡೆಯವರು ಹಿಂದಿ ಪ್ರಾಧ್ಯಾಪಕರು ಆದರೆ ಇವರ ಮಾತೃಭಾಷೆ ಕನ್ನಡ. ಈ ಎರಡು ಭಾಷೆಗಳ ಮೇಲೆ ತಮ್ಮದೇ ಆದ ಹಿಡಿತವನ್ನು ಸಾಧಿಸಿ, ಓದು, ಅಧ್ಯಾಪನ ಶೈಲಿಯನ್ನು ವಿಭಿನ್ನವಾಗಿ ರೂಢಿಸಿಕೊಂಡಿರುವರು.



Scanned with OKEN Scanner

ಅಧ್ಯಯನದ ಹರವು ವಿಸ್ತಾರಗೊಳ್ಳುತ್ತಾ ಹೋದ ಹಾಗೆ ಹೊಸ-ಹೊಸ ವಿಚಾರ, ಚರ್ಚೆ, ಚಿಂತನೆಗಳನ್ನು ತಮ್ಮ ಬರವಣಿಗೆಯಲ್ಲಿ ರೂಢಿಸಿಕೊಂಡಿದ್ದಾರೆ. ಹಾಗಾಗಿ ಇಲ್ಲಿಯ ಹನ್ನೊಂದು ಜನರ ಪರಿಚಯವನ್ನು ಆಲೋಚನಾತ್ಮಕ ಹೊಳಹುಗಳೊಂದಿಗೆ ನಿರೂಪಿಸಿರುವರು. ಅವರ ಸ್ಥೂಲ ವಿವೇಚನೆ ಈ ಪ್ರಬಂಧದ ಉದ್ದೇಶ.

ಆಧುನಿಕ ಯುಗದಲ್ಲಿ ಸಾಮಾಜಿಕ, ದಾರ್ಶನಿಕ ಹಾಗೂ ರಾಜನೀತಿಕ ಮಾನ್ಯತೆಗಳು ವಿಶ್ವವನ್ನು ಎಚ್ಚರಿಸಿದವು. ಹಾಗೆಯೇ ಹಿಂದಿ ಭಾಷೆಯ ಕವಿಗಳು ಭಾರತೀಯ ದಾರ್ಶನಿಕ ಮಾನ್ಯತೆಗಳಿಂದ ಪ್ರಭಾವಿತಗೊಂಡು ಸರ್ವಾತ್ಮಕವಾದ, ಅದ್ವೈತವಾದ, ಸರ್ವಚೇತನಾವಾದ ಹಾಗೂ ಅಂತರ್ ಚೇತನಾವಾದಗಳ ಕಡೆಗೆ ಹೆಜ್ಜೆ ಹಾಕಿದರು. ಜೊತೆಗೆ ಭೌತಿಕ ದರ್ಶನದ ಮಾನ್ಯತೆಗಳ ಆಧಾರದ ಮೇಲೆ ಸಮಾಜವಾದ ಮತ್ತು ಸಾಮ್ಯವಾದದ ಪ್ರಭಾವಕ್ಕೆ ಒಳಗಾದರು. ಅಷ್ಟೇ ಅಲ್ಲ ಆಧುನಿಕ ಯುಗದಲ್ಲಿ ಮಾನವತಾವಾದದ ಧ್ವನಿ ಎಲ್ಲಕ್ಕಿಂತ ಹೆಚ್ಚು ಪ್ರಖರಗೊಂಡಿತು. ಈ ಎಲ್ಲ ದಾರ್ಶನಿಕ ಮಾನ್ಯತೆಗಳು ಕಾವ್ಯದ ಮುಖಾಂತರ ಹೊರತರುವ ಪ್ರಯತ್ನವನ್ನು ಬಹಳಷ್ಟು ಕವಿಗಳು ಮಾಡಿದ್ದಾರೆ. ಆಧುನಿಕ ಯುಗದ ಕವಿಗಳಲ್ಲಿ ಕವಿವರ್ಯ ಸುಮಿತ್ರಾನಂದ ಪಂತರು ಈ ಎಲ್ಲ ದಾರ್ಶನಿಕ ವಿಚಾರಗಳನ್ನು ತಮ್ಮ ಸುಂದರ ಕಲ್ಪನೆ ಹಾಗೂ ಸುಕುಮಾರ ಭಾವನೆಗಳಿಂದ ಅಭಿವ್ಯಕ್ತಪಡಿಸಿದ್ದು, ಹಿಂದಿ ಆಧುನಿಕ ಕಾವ್ಯವನ್ನು ಧನ್ಯಗೊಳಿಸಿದ್ದಾರೆ. ಅದಕ್ಕಾಗಿಯೇ ಕವಿ ಸುಮಿತ್ರಾನಂದನ ಪಂತರಿಗೆ ಆಧುನಿಕ ಯುಗದ ಪ್ರಾತಿನಿಧಿಕ ಕವಿ ಎಂದು ಕರೆಯುತ್ತಾರೆ.

ಇವರ ಸಾಹಿತ್ಯ-ಶಾಸ್ತ್ರದಲ್ಲಿ ಕಾವ್ಯದ ಪ್ರಮುಖ ನಾಲ್ಕು ತತ್ವಗಳನ್ನು ಕಾಣುತ್ತೇವೆ. ರಾಗ-ತತ್ವ, ಕಲ್ಪನಾ-ತತ್ವ, ಬುದ್ಧಿ-ತತ್ವ ಮತ್ತು ಶೈಲಿ-ತತ್ವ ಇವುಗಳಲ್ಲಿ ಕಲ್ಪನೆಯ ತತ್ವಕ್ಕೆ ತುಂಬಾ ಮಹತ್ವವಿದೆ. ಕಾರಣ ಕಲ್ಪನೆಯಲ್ಲಿ ಅದ್ಭುತ ಶಕ್ತಿ ಇದೆ. ಅದರಿಂದಲೆ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಜೀವನ ಮತ್ತು ಜಗತ್ತಿನ ಮಾನಸಿಕ ಚಿತ್ರವನ್ನು ಚಿತ್ರಿಸಬಹುದು. ಈ ಕಲ್ಪನೆ ಕಲ್ಪವೃಕ್ಷದಂತೆ ಮಾನವನ ಪರಿಸ್ಥಿತಿಯನ್ನು ಬಿಂಬಿಸುವಲ್ಲಿ ಕವಿಗೆ ತನ್ನ ರಚನೆಯಲ್ಲಿ ಜೀವ ತುಂಬುವ ಕೆಲಸ ಮಾಡುತ್ತದೆ. ಆಚಾರ್ಯ ರಾಮಚಂದ್ರ ಶುಕ್ಲರು ಕಲ್ಪನೆ ಒಂದು ತರಹದ ಭಾವನೆ ಎಂದಿದ್ದಾರೆ. ಕವಿಯ ಕಲ್ಪನೆ ಎಷ್ಟು ಎತ್ತರಕ್ಕೆ ತಲುಪುವುದೋ ಅಷ್ಟು ಅವರ ರಚನೆ ಮಾರ್ಮಿಕವಾಗುತ್ತದೆ. ಅದಕ್ಕಾಗಿ ಕಾವ್ಯದಲ್ಲಿ ಕಲ್ಪನೆಗೆ ಮಹತ್ವದ ಸ್ಥಾನವಿದೆ. ಕಲ್ಪನೆಯಲ್ಲಿ ಅನೇಕ ಪ್ರಕಾರಗಳಿವೆ. ಕ್ಲಿಷ್ಟ ಕಲ್ಪನೆ, ದೂರದೃಷ್ಟಿಯ ಕಲ್ಪನೆ, ರಂಗೀನ ಕಲ್ಪನೆ, ಮಧುರ ಕಲ್ಪನೆ, ಕೋಮುಲ ಕಲ್ಪನೆ ಮುಂತಾದವುಗಳನ್ನು ಮೇರವಾಡೆಯವರು ಗುರುತಿಸುವರು.

ಆಧುನಿಕ ಯುಗದ ಹಿಂದಿ ಸಾಹಿತ್ಯದಲ್ಲಿ ಲೋಕಪ್ರಿಯ ಕವಿಗಳಲ್ಲಿ ಹೊಸ ವಿಚಾರದ ಚಿಂತಕ ರಾಮಧಾರಿಸಿಂಹ ದಿನಕರ ಅವರು ಒಬ್ಬರು. ಅವರು ದೇಶ - ವಿದೇಶಗಳಲ್ಲಿ ಪ್ರಸಿದ್ಧರಾದವರು. ಭಾರತೀಯ ಸಂಸ್ಕೃತಿಯ ಪ್ರತಿನಿಧಿ ಕವಿ ಎಂದು ಗುರುತಿಸಿದ್ದರೂ ರಾಷ್ಟ್ರಪ್ರೇಮ ಅವರ ಬದುಕಿನ ಒಂದು ಮುಖ. ಅದರೊಂದಿಗೆ ಮತ್ತೊಂದು ಮಹತ್ವಪೂರ್ಣ ಅಂಗವೆಂದರೆ ಅವರ ಮಾನವ ಪ್ರೇಮ. ದಿನಕರ ಅವರು ಗದ್ಯ ಪದ್ಯಗಳೆರಡರಲ್ಲೂ ತಮ್ಮನ್ನು ಸಮರ್ಥವಾಗಿ ಅಭಿವ್ಯಕ್ತಗೊಳಿಸಿ ಕೊಂಡಿರುವುದರಿಂದ ಈ ಸಾಹಿತ್ಯ ಪ್ರಕಾರಗಳು ಶ್ರೀಮಂತವಾದುದಷ್ಟೇ ಅಲ್ಲ ಅವರೂ ಸಹ ಶ್ರೀಮಂತರಾಗಿದ್ದಾರೆ. ಪ್ರಾಣಭಂಗದಿಂದ ಹಾರೇ-ಸೆ-ಹರಿನಾಮ್ ವರೆಗೆ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಹಿಂದಿ ಸಾಹಿತ್ಯ ಸಮೃದ್ಧಗೊಳಿಸಿದ್ದಾರೆ. ರಸವಮತಿ, ನೀಲ್ ಕುಸುಮ, ಮಿಟ್ಟಿ ಕೀ ಓರ್ ಧರ್ಮ. ನೈತಿಕತಾ ಔರ್ ವಿಜ್ಞಾನ, ಕಾವ್ಯ ಕೀ ಭೂಮಿಕಾ ಹಾಗೂ ಪಂತ ಪ್ರಸಾದ ನಿರಾಲಾ ಹೀಗೆ ಅನೇಕ ಕೃತಿಗಳಿಂದ ಅವರ ಸಾಹಿತ್ಯದ ವ್ಯಕ್ತಿತ್ವ ಪರ್ವತಾಕಾರವಾಗಿದೆ.

ರಾಮಧಾರಿಸಿಂಹ ದಿನಕರ ಅವರ ಶ್ರೇಷ್ಠಕೃತಿ 'ಊರ್ವಶಿ'. ಈ ಮಹಾಕಾವ್ಯಕ್ಕೆ ೧೯೭೨ ರ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಆಧುನಿಕ ಹಿಂದಿ ಸಾಹಿತ್ಯದಲ್ಲಿ ಇದೊಂದು ಮೇರು ಕೃತಿ. ಪೂರೂರವ, ಊರ್ವಶಿ, ಜಾಶೀನರಿ, ಸಹಜನ್ಯ, ರಂಭಾ, ಮೇನಕಾ, ಚಿತ್ರಲೇಖಾ, ಸುಕನ್ಯಾ ಹಾಗೂ ಆಯು ಮಹಾಕಾವ್ಯದ ಮುಖ್ಯ ಪಾತ್ರಗಳು. ಊರ್ವಶಿ ಹಾಗೂ ಪುರೂರವ ಅವರ ಹಳೆಯ ಪೌರಾಣಿಕ ಕತೆಯನ್ನು ಆಧುನಿಕ ಸಂದರ್ಭದಲ್ಲಿ ಹೊಸ ದೃಷ್ಟಿಯಿಂದ ದಿನಕರ ಅವರು ಚಿತ್ರಿಸಿದ್ದಾರೆ. ಈ ಕಾವ್ಯದ ಶೈಲಿ ಸಂಗೀತಾತ್ಮಕವಾಗಿದೆ ಎಂದು ಮೇರವಾಡೆಯವರು ಚಿತ್ರಿಸುವರು.

ಹಿಂದಿಯ ಆಧುನಿಕ ಕಾವ್ಯದ ಪ್ರಯೋಗಶೀಲ 'ಹೊಸ ಕವಿತೆ' ಯಿಂದ ಹಿಂದಿ ಕಾವ್ಯ ಓದುಗನ ಮಾನಸದಲ್ಲಿ ಅದ್ಭುತ ಬದಲಾವಣೆ ಬಂದಿದೆ. ಈ ಕಾವ್ಯಧಾರೆಗೆ ಎಷ್ಟೋ ಕವಿಗಳು ಪ್ರವಾಹಿತಗೊಳಿಸಿ ಅದಕ್ಕೊಂದು ಹೊಸ ನೆಲೆ ಕೊಟ್ಟವರೆಂದರೆ ಸಪ್ತಕ ಕವಿಗಳು. ಅದರಲ್ಲಿ ಮೊಟ್ಟ ಮೊದಲನೆಯ ಸ್ಥಾನ ಕವಿ ಸಚ್ಚಿದಾನಂದ ಹೀರಾನಂದ ವಾತ್ಸ್ಯಾಯಾರ 'ಅಜ್ಞೇಯ' ಒಂದು ದೃಷ್ಟಿಯಿಂದ ಹೊಸ ಕವಿತೆಯ ಜನಕನೆಂದು ಕರೆಯುವರು. ಅದಕ್ಕಾಗಿ ಅವರಿಗೆ ಹೊಸ ಕವಿತೆಯ ಪ್ರತಿನಿಧಿ ಕವಿಯ ಸ್ಥಾನವೂ ದೊರಕಿದೆ.

ಹಿಂದಿ ಕಾವ್ಯ ಕ್ಷೇತ್ರದ ದ್ವಿವೇದಿಯುಗವು ಉಪದೇಶಾತ್ಮಕ ಮತ್ತು ನೈತಿಕ ಪ್ರಧಾನ ಕವಿತೆಗಳ ವಿರೋಧ ವ್ಯಕ್ತವಾಗಿತ್ತು ಈ ಯುಗದ ಕಾವ್ಯದಲ್ಲಿ ರಹಸ್ಯಮಯ

ಭಾವನೆಗಳು, ಪತೀಕಾರಾತ್ಮಕ ಪ್ರಯೋಗಗಳು, ಚಿತ್ರಮಯ ಭಾಷೆ, ಮಧುರ ಕಲ್ಪನೆ, ಧ್ವನ್ಯಾತ್ಮಕವಾದ ಉಪಚಾರ, ವಕ್ರತೆ, ಸಹಾನುಭೂತಿಯ ಸಂವೇದನೆಗಳು, ಪ್ರಕೃತಿಯ ರಮಣೀಯ ಚಿತ್ರಗಳು ಮುಂತಾದವುಗಳು ಪ್ರಧಾನ್ಯತೆಯನ್ನು ಕಾಣಬಹುದು. ಈ ದ್ವಿವೇದಿಯುಗದ ಕವಿತೆಗಳಲ್ಲಿ ಸಾಕಷ್ಟು ನೈತಿಕ ಮೌಲ್ಯಗಳು, ಸಾಮಾಜಿಕ ಸುಧಾರಣೆಯ ಕುರಿತಾದ ಉಪದೇಶಗಳು, ಮಾನವೀಯತೆಯಂತಹ ಸಂದೇಶವನ್ನು ಸಾರಿದ್ದರು.. ಜಾತ್ಯಾತೀತ ಮನೋಭಾವ, ಧಾರ್ಮಿಕ ಪರಂಪರೆ, ಸಂಪ್ರದಾಯಗಳು ಸಾರ್ವಕಾಲಿಕವಾದ ಮತ್ತು ಸಕಾರಾತ್ಮಕವಾದ ಭಾವನೆಯೊಂದಿಗೆ ಪ್ರಸಾರಗೊಳಿಸುವ ಸರ್ವಚೇತನ ಇದರದಾಗಿತ್ತು.

'ಮೀರಾ' ಎಂದೇ ಖ್ಯಾತಿವೆತ್ತ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತಳಾದ ಮಹಾದೇವಿ ವರ್ಮಾ ಹಿಂದಿ ಸಾಹಿತ್ಯದ ಶ್ರೇಷ್ಠ ಕವಯತ್ರಿ ಹಾಗೂ ಅಪ್ರತಿಮ ಪದ್ಯ ಹಾಗೂ ಗದ್ಯ ಎರಡರಲ್ಲಿ ಸಾಹಿತ್ಯ ಬೆಳವಣಿಗೆಯಿಂದ ಹೊರಬಂದಿವೆ. ತಮ್ಮ ಕಾವ್ಯದಲ್ಲಿ ಛಾಯಾವಾದ ಹಾಗೂ ರಹಸ್ಯವಾದ ಎರಡೂ ಭಾವನೆಗಳಿಂದ ಕೂಡಿದ ಗೀತೆಗಳಲ್ಲಿ ವೈಯಕ್ತಿಕ ಭಾವನೆ ಹಾಗೂ ವೇದನೆಗಳನ್ನು ವ್ಯಕ್ತಪಡಿಸಿದ್ದಾರೆ. ಲೇಖಕಿಯ ರೂಪದಲ್ಲಿ ಅವರ ವ್ಯಕ್ತಿತ್ವದ ಬೇರೆ ರೂಪ ಕಂಡು ಬರುವುದು. ಹಿಂದಿ ಗದ್ಯದ ವಿಕಾಸ ಯಾತ್ರೆಯಲ್ಲಿ ಮಹಾದೇವಿ ವರ್ಮಾ ಅವರ ಸ್ಥಾನ ಅಗ್ರಗಣ್ಯವಾಗಿದೆ. ಹಿಂದಿ ಸಾಹಿತ್ಯದ ಮಹತ್ವಪೂರ್ಣ ಪ್ರಕಾರವಾದ ಸ್ಮೃತಿಯಿಂದ ಹಿಂದಿ ಸಾಹಿತ್ಯದ ಇತಿಹಾಸಕ್ಕೆ ಗೌರವ ತಂದುಕೊಟ್ಟಿದ್ದಾರೆ. ಇವರ ಗದ್ಯ ಸಾಹಿತ್ಯವು ಯಾವುದೇ ವಿಶೇಷ ಅಥವಾ ಕ್ಷೇತ್ರಕ್ಕೆ ಸೀಮಿತಗೊಳ್ಳದೆ ಸಂಸ್ಕೃತಿ, ದೇಶ, ಭಾಷೆ, ಸಾಹಿತ್ಯ, ಸಮಾಜ, ಸ್ತ್ರೀ-ಜೀವನ, ರಾಷ್ಟ್ರೀಯತೆ ಎಲ್ಲವನ್ನು ಒಳಗೊಂಡಿದೆ ಎಂದು ಮೇರವಾಡೆ ಅವರು ಗುರುತಿಸಿದ್ದಾರೆ.

ಬಹುಮುಖ ಪ್ರತಿಭೆಯ ನರೇಶ ಮೆಹತಾ ಅವರು ಅಪ್ಪಟ ಗಾಂಧಿವಾದಿಗಳು. ಕ್ರಾಂತಿಕಾರಿಗಳು ಹಾಗೂ ಸಂಗೀತ ಪ್ರೇಮಿಗಳೂ ಆಗಿದ್ದರು. ಜ್ಯೋತಿಷ್ಯ ಶಾಸ್ತ್ರದಲ್ಲಿ ನಂಬಿಕೆ ಇದ್ದ ಅವರು ಎಲೆ-ಅಡಿಕೆ ಮತ್ತು ತಂಬಾಕು ಪ್ರಿಯರಾಗಿದ್ದರು. ಅಜ್ಞೇಯ ಅವರ ಎರಡನೆಯ ಚರಣದ ಕವಿಗಳಾಗಿದ್ದರು. ಕಾದಂಬರಿಕಾರ, ಕಥೆಗಾರ, ನಾಟಕಕಾರ, ವಿಮರ್ಶಕ, ಸಂಪಾದಕ, ಕವಿ, ಲೇಖಕ, ಶಿಲ್ಪಿ, ಶ್ರಮಿಕ ಹೀಗೆ ಬಹುಮುಖ ಪ್ರತಿಭೆ ಆಗಿರುವದಲ್ಲದೇ ಮಸ್ತ ಮೌಲಾ ಅಂತಾ ಪ್ರಸಿದ್ಧಿಯನ್ನು ಪಡೆದಿದ್ದಾರೆ.

ನರೇಶ ಮೆಹತಾ ಅವರ ಏಳು ಕಾದಂಬರಿಗಳು ಪ್ರಕಾಶಗೊಂಡಿದ್ದು ಅವೆಲ್ಲವು ಸಾಮಾಜಿಕ ಕಾದಂಬರಿಗಳಾಗಿವೆ. ಅವರ ಜೀವನ ದೃಷ್ಟಿ ಮಾನವತಾವಾದಿಯಾಗಿದ್ದು



Scanned with OKEN Scanner

ಅವರ ಸಾಹಿತ್ಯದಲ್ಲಿ ಮಾನವೀಯತೆಯ ಕ್ರೌರ್ಯ ಬಹಳ ಸುಂದರವಾಗಿ ಚಿತ್ರಣಗೊಂಡಿದೆ. ಮಹಿಳೆಯರ ಸಮಸ್ಯೆಗಳತ್ತ ಅವರ ಎಲ್ಲ ಕಾದಂಬರಿಗಳು ಬೆಳಕು ಚೆಲ್ಲಿವೆ. 'ಡೂಬತೆ ಮಸ್ತೂಲ' ಕಾದಂಬರಿಯಲ್ಲಿ ಮಧ್ಯಮ ವರ್ಗದ ಕುಟುಂಬದ ನಾಯಕಿ 'ರಂಜನಾ' ಳ ಜೀವನದಲ್ಲಿ ಬಂದು ಹೋಗುವ ಅನೇಕ ಪುರುಷರಲ್ಲಿ ಯಾರೊಬ್ಬರು ಅವಳನ್ನು ಅರ್ಥೈಸಿಕೊಳ್ಳುವುದಿಲ್ಲ. ಪುರುಷನ ಕಠೋರಕ್ಕೆ ಬೇಸತ್ತು ಆತ್ಮಹತ್ಯೆಗೆ ಶರಣು ಹೋಗುತ್ತಾಳೆ. 'ಧೂಮಕೇತು: ಏಕ ಶೃತಿ' ಕಾದಂಬರಿಯಲ್ಲಿ ಮಾತೃಹೀನ ಬಾಲಕ 'ಉದಯನ್'ನ ಮಾನಸಿಕ ವಿಕಾಸದ ಮನೋವೈಜ್ಞಾನಿಕ ವಿಶ್ಲೇಷಣೆ ಮಾಡಲಾಗಿದೆ. ಜೀವನದಲ್ಲಿ ಸಣ್ಣ ಪುಟ್ಟ ಘಟನೆಗಳು ಬಾಲಕನ ಮೇಲೆ ಯಾವ ರೀತಿಯಾಗಿ ಪ್ರಭಾವಿತಗೊಳ್ಳುತ್ತವೆ ಎಂಬುದನ್ನು ಅತೀ ಸೂಕ್ಷ್ಮವಾಗಿ ಮೇರೆವಾಡೆ ಅವರು ಚಿತ್ರಿಸಿದ್ದಾರೆ.

ನಿರ್ಮಲ ವರ್ಮಾ ಅವರು ತಮ್ಮ ಹೆಸರಿಗೆ ತಕ್ಕಂತೆ ನಿರ್ಮಲ ವ್ಯಕ್ತಿತ್ವ ಹೊಂದಿದ್ದರು. ಸ್ವಾತಂತ್ರ್ಯೋತ್ತರ ಹಿಂದಿ ಕಥಾ ಸಾಹಿತ್ಯದಲ್ಲಿ ಪ್ರಮುಖ ಲೇಖಕರಾದ ಅವರು ಮಧ್ಯಯುಗದ ಪರಂಪರೆಯನ್ನು ಆಧುನಿಕ ಯುಗದ ಅಸ್ತಿತ್ವ ಚೇತನಕ್ಕೆ ಜೋಡಿಸುವ ಕಥೆಗಾರರಾಗಿದ್ದರು. ಹಿಂದಿ ಸಾಹಿತ್ಯದಲ್ಲಿ ಅವರ ಸಾಹಿತ್ಯದ ಕುರಿತು ಬಹಳಷ್ಟು ಸಂಶೋಧನೆಯ ಕಾರ್ಯಗಳಾಗಿವೆ.

ನಿರ್ಮಲಜಿ ಅವರು ಕೇವಲ ಲೇಖಕರಾಗದೆ ಸಂಗೀತ, ಚಿತ್ರಕಲೆ ಹಾಗೂ ಚಲನಚಿತ್ರಗಳಲ್ಲಿಯೂ ಆಸಕ್ತರಾಗಿದ್ದರು. ಅವರ ಪ್ರಸಿದ್ಧ ಕತೆ 'ಮಾಯಾದರ್ಪಣ' ಚಲನಚಿತ್ರವಾಗಿ ೧೯೭೩ ರಲ್ಲಿ ಅತ್ಯುತ್ತಮ ಚಲನಚಿತ್ರವೆಂದು ಪುರಸ್ಕಾರ ಪಡೆಯಿತು. ಅವರು ಕೇವಲ ಕಥೆಗಾರರಾಗದೆ ಒಬ್ಬ ಶ್ರೇಷ್ಠ ಚಿಂತಕರೂ ಆಗಿದ್ದರು. ಭಾರತೀಯ ಸಂಸ್ಕೃತಿ ಮತ್ತು ಜೀವನ ಮೌಲ್ಯಗಳನ್ನು ಅತ್ಯಂತ ಪ್ರಭಾವಪೂರ್ಣ ಮತ್ತು ಮನಮೋಹಕವಾಗಿ ತಮ್ಮ ಕೃತಿಗಳಲ್ಲಿ ಚಿತ್ರಿಸುವುದರೊಂದಿಗೆ ಆಧುನಿಕ ಭಾರತದ ಮಾನವನ ಅನುಭವ ಮತ್ತು ಆತನ ಸಮಸ್ಯೆಗಳನ್ನು ಸಹ ವಿವರಿಸಿದ್ದಾರೆ. ಗಂಭೀರ ಚಿಂತನೆ ಕಲಾತ್ಮಕ ಅಭಿವ್ಯಕ್ತಿ, ಸಮಾಜ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಗೌರವಿಸುತ್ತಿದ್ದ ನಿರ್ಮಲಜಿ ಒಬ್ಬ ಅಪ್ರತಿಮ ಸಾಹಿತ್ಯಕಾರರಾಗಿದ್ದರು ಎಂದು ಎಸ್. ಟಿ. ಮೇರೆವಾಡೆ ಅವರು ಗುರುತಿಸುವರು.

೨೦೦೯ ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿಯು ಕುಂವರ ನಾರಾಯಣ ಅವರಿಗೆ ಅವರ ಸಮಗ್ರ ಸಾಹಿತ್ಯಕ್ಕೆ ಕೊಡಲಾಗಿದೆ. ಕುಂವರ ನಾರಾಯಣ ಅವರ ಸೃಜನಶೀಲತೆಯು ವಾಸ್ತವಿಕ ಹಾಗೂ ಸಹಜವಾದ ಅಭಿವ್ಯಕ್ತಿ ಗೀತ ಕಾವ್ಯದ



Scanned with OKEN Scanner

ಮೂಲಕ ಪ್ರಕಟವಾಗಿದೆ. ಅವರ ಹೊಸ ಕಾವ್ಯದ ಮೂರನೆಯ ಚರಣದ ಪ್ರಮುಖ ಕವಿಗಳಲ್ಲಿ ಒಬ್ಬರು. ಪ್ರಗತಿ ಪಥದ ಕತೆಗೆ ಅವರ ಒಲವು ಹೆಚ್ಚಿತ್ತು ಎಂದು ಲೇಖಕರು ತಿಳಿಸುವರು.

ಹಿಂದಿ ಸಾಹಿತ್ಯದ ಸುಪ್ರಸಿದ್ಧ ವ್ಯಂಗ್ಯಕಾರ, ಕಾದಂಬರಿಕಾರ ಹಾಗೂ ಕಥೆಗಾರರಾದ ಶ್ರೀಲಾಲ ಶುಕ್ಲ ಅವರಿಗೆ ೨೦೦೯ ಸಮಗ್ರ ಸಾಹಿತ್ಯಕ್ಕಾಗಿ ಜ್ಞಾನಪೀಠ ಪ್ರಶಸ್ತಿ ಪಡೆದುಕೊಂಡರು. ಇವರ ಎರಡು ಜೀವನ ಚರಿತ್ರೆಗಳು ಹೊರಬಂದಿವೆ. ಒಂದು ಭಗವತಿಚರಣ ವರ್ಮ, ಇನ್ನೊಂದು ಅಮೃತಲಾಲ ನಾಗರ, ಭಗವತಿ ಚರಣ ವರ್ಮಾ ಅವರು ಆಧುನಿಕ ಹಿಂದಿ ಸಾಹಿತ್ಯ ಶ್ರೇಷ್ಠ ಸಾಹಿತ್ಯಕಾರರು ಕಥೆ, ಕಾದಂಬರಿ, ಕಾವ್ಯ, ನಾಟಕ, ನಿಬಂಧ ಹಾಗೂ ಹಾಸ್ಯ-ವ್ಯಂಗ್ಯ ಲೇಖನಗಳಿಂದ ಅವರು ಹಿಂದಿ ಸಾಹಿತ್ಯ ಶ್ರೀಮಂತಗೊಳಿಸಿದ್ದಾರೆ. ವರ್ಮಾ ಅವರ ಐದು ದಶಕಗಳ ಸಾಹಿತ್ಯ ಸೇವೆಯನ್ನು ಶುಕ್ಲಜಿ ಅವರು ಬಹು ಸುಂದರವಾಗಿ ವಿವರಿಸಿದ್ದಾರೆ ಎಂದು ಎಸ್. ಟಿ. ಮೇರೆವಾಡೆ ಅವರು ತಮ್ಮ ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ.

ಅಮರಕಾಂತ ಒಬ್ಬ ಪ್ರಗತಿಶೀಲ ಸಾಹಿತ್ಯಕಾರರು ಹಿಂದಿ ಕಥಾ ಸಾಹಿತ್ಯದ ಅನೇಕ ಸಾಹಿತ್ಯಕಾರರಲ್ಲಿ ಪ್ರೇಮಚಂದರ ಸಮೀಪದ ಸಾಹಿತ್ಯಕಾರ ಅಮರಕಾಂತ ಅಂತಾ ಹೇಳಬಹುದು. ಸರಳ ಸ್ವಭಾವ, ಸಾಧಾರಣ ಜೀವನ ಶೈಲಿ, ಸ್ಪಷ್ಟತೆ, ಸೂಕ್ಷ್ಮ ಸ್ವಭಾವ ಇವರಲ್ಲಿಯ ಗುಣಗಳನ್ನು ಅವರ ಕಥಾ ಸಾಹಿತ್ಯದಲ್ಲಿ ಕಾಣುತ್ತೇವೆ. ಮಾನವೀಯ ಸಂವೇದನೆ, ಜೀವನದ ವಾಸ್ತವಿಕತೆ, ಪ್ರಯತ್ನ ಮತ್ತು ಸಂಕಲ್ಪ ಅವರ ಪಾತ್ರಗಳಲ್ಲಿ ತುಂಬಿಕೊಂಡಿವೆ. ಅಮರಕಾಂತರು ವ್ಯಂಗ್ಯ ಶೈಲಿಯಲ್ಲಿ ಆಧುನಿಕ ಮಾನವನ ಕ್ರೂರ ನೀತಿಯನ್ನು ಬಹು ಸುಂದರವಾಗಿ ಚಿತ್ರಿಸಿದ್ದಾರೆ.

ಅಮರಕಾಂತರ 'ದೂಪಹರ ಕಾ ಭೋಜನ' ನಿಮ್ನ ಮಧ್ಯಮ ವರ್ಗದ ಪರಿವಾರದ ಆಸೆ ಮತ್ತು ಅಸಮರ್ಥತತೆಯನ್ನು ಸ್ಪಷ್ಟಪಡಿಸುವ ಕಥೆ ಅವರ ಬಹಳಷ್ಟು ಕಥೆಗಳು ಸಾಮಾನ್ಯ ಜನ-ಜೀವನದ ಬದುಕನ್ನು ತೋರುತ್ತವೆ. ಪ್ರತಿದಿನ ನಡೆಯುವ ಸಣ್ಣಪುಟ್ಟ ಘಟನೆಗಳ ಜೊತೆಗೆ ಜೀವನ ಸಂಘರ್ಷವನ್ನು ನಿರೂಪಿಸಲಾಗಿದೆ. ಬಡತನ, ಆರ್ಥಿಕ ವಿಷಮತೆ, ಜೀವನಾನುಭವ ಕಥೆಯ ಮುಖ್ಯ ಅಂಶಗಾಳಗಿವೆ ಎಂದು ಮೇರೆವಾಡೆ ಅವರು ಚಿತ್ರಿಸಿದ್ದಾರೆ.

ಕೇದಾರನಾಥ ಸಿಂಹ ಅವರು ಸಮಕಾಲೀನ ಕವಿಗಳಲ್ಲಿ ಒಬ್ಬ ಸಶಕ್ತ ಕವಿಗಳು. ಗ್ರಾಮೀಣ ಸೊಗಡು ಅವರ ಕವಿತೆಗಳ ಜೀವನಾಡಿ ಮುಕ್ತಛಂದಗಳ ಜೊತೆಗೆ ಲೋಕ ಗೀತೆಗಳನ್ನು ರಚಿಸಿರುವ ಕೇದಾರನಾಥ ಅವರ ಗೀತೆಗಳಲ್ಲಿ ಸಹಜತೆ,

ತಾಜಾತನ, ಲಯದ ಜೊತೆಗೆ ಗ್ರಾಮೀಣ ವೈಭವದ ಸಿರಿಯನ್ನು ಕಾಣುತ್ತೇವೆ. ಪ್ರಗತಿವಾದಿ ಕವಿಗಳಾದ ನಾಗಾರ್ಜುನ, ತ್ರಿಲೋಚನ ಮತ್ತು ಕೇದಾರನಾಥ ಅಗರವಾಲರ ರಚನೆಯಂತೆ ಇವರ ಬರವಣಿಗೆಯಲ್ಲಿ ಸಾಮಾನ್ಯ ಜೀವನದ ವೇದನೆ ತುಂಬಿಕೊಂಡಿದೆ. ೨೦೧೩ ರಲ್ಲಿ ಸಾಹಿತ್ಯದ ಸರ್ವೋಚ್ಚ ಪುರಸ್ಕಾರವಾದ ಜ್ಞಾನಪೀಠ ಪುರಸ್ಕಾರ ದೊರೆತದ್ದು ಹೆಮ್ಮೆಯ ಸಂಗತಿಯಾಗಿದೆ.

ಹಿಂದಿ, ಪಂಜಾಬಿ, ಉರ್ದು, ಸಂಸ್ಕೃತ ಹಾಗೂ ಇಂಗ್ಲೀಷ ಭಾಷೆಯಲ್ಲಿ ಪ್ರಭುತ್ವ ಪಡೆದ ಕೃಷ್ಣಾ ಸೋಬ್ತಿಯವರ ಸಮಗ್ರ ಸಾಹಿತ್ಯದಲ್ಲಿ ಪ್ರಖರವಾದ ವೈಚಾರಿಕತೆ, ಸ್ತ್ರೀಪರವಾದ ಗಟ್ಟಿ ನಿಲವು, ಸ್ತ್ರೀ ಪುರುಷರ ಸಂಬಂಧ, ಶೀಲ–ಅಶ್ಲೀಲದ ಬಗ್ಗೆ ನೇರ ಹಾಗೂ ಸ್ಪಷ್ಟ ನುಡಿಗಳು ವ್ಯಕ್ತವಾಗುತ್ತವೆ. ಸಾಮಾಜಿಕ ಅಸಮಾನತೆ ವಿರುದ್ಧ ಗಂಭೀರವಾದ ನಿಲುವು ವ್ಯಕ್ತವಾಗುವುದರಿಂದಲೇ ಪರ ಹಾಗೂ ವಿರೋಧ ಅಭಿಪ್ರಾಯಗಳನ್ನು ಸೋಬ್ತಿಯವರು ನಿರಂತರವಾಗಿ ಎದುರಿಸುತ್ತಲೇ ಬಂದಿದ್ದಾರೆ ಎಂದು ಮೇರವಾಡೆಯವರು ವರ್ಣಿಸಿದ್ದಾರೆ.

ಸಮಕಾಲೀನ ಹಿಂದಿ ಬರವಣಿಗೆಯ ಶೈಲಿ, ರೂಪ, ತಂತ್ರ, ವಸ್ತುವಿನ್ಯಾಸ, ಕಥೆ, ಕಾವ್ಯ, ಪ್ರಬಂಧ, ಕಾಬಂದರಿಗಳಂಥ ಪ್ರಮುಖ ಪ್ರಕಾರಗಳಲ್ಲಿ ಹುಟ್ಟಿಕೊಂಡ ಕೃತಿಗಳಲ್ಲಿ ಸರ್ವಕಾಲಿಕ ಮೌಲ್ಯಗಳ ಹೆಣಿಕೆ, ಸಮಾಜವನ್ನು ಸರಿಪಡಿಸುವ ಕನಸು, ಮನಸ್ಸುಗಳನ್ನು ಶುದ್ಧೀಕರಿಸುವ, ನೈತಿಕತೆಯ ಓರೆಕೋರೆ ಸರಿಪಡಿಸುವ ತತ್ವಜ್ಞಾನ, ಅಭಿಮಾನ, ಸ್ವಾಭಿಮಾನ, ಭಕ್ತಿ, ದೇಶಭಕ್ತಿಯನ್ನು ಯುವ ಜನಾಂಗಕ್ಕೆ ತಿಳಿಸುವದು ಜೊತೆಗೆ ತರಬೇತಿಯ ಮಾಹಿತಿ ಹೀಗೆ ಈ ನಿಟ್ಟಿನ ಕನಸುಗಳನ್ನು ಬರವಣಿಗೆಯಲ್ಲಿ ತುಂಬಿಕೊಟ್ಟಿರುವವರ ಪರಿಚಯ ಈ ಕೃತಿಯಲ್ಲಿ ಕಾಣುತ್ತೇವೆ. ಒಟ್ಟು ಹನ್ನೊಂದು ಜನ ಹಿಂದಿ ಜ್ಞಾನಪೀಠ ಪ್ರಶಸ್ತಿ ವಿಜೇತರು. ಇವರು ಹನ್ನೊಂದು ಅಕ್ಷೋಹಿಣಿಗಳೇ ಆಗಿದ್ದಾರೆ. ಇವರನ್ನು ಕನ್ನಡಕ್ಕೆ ಪರಿಚಯಿಸಿ ಕನ್ನಡ ಸಾಹಿತ್ಯದ ಕನ್ನಡ ಓದುಗರ ಅಧ್ಯಯನ ವಿಸ್ತಾರಗೊಳಿಸಿದ ಡಾ. ಎಸ್. ಟಿ. ಮೇರವಾಡೆಯವರಿಗೆ ಗೌರವಪೂರ್ವ ಅಭಿನಂದನೆಗಳು.

---

ಸಹಾಯಕ ಪ್ರಾಧ್ಯಾಪಕ, ವಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ. ಎಸ್. ಬಿ. ವಾಣಿಜ್ಯ ಮಹಾವಿದ್ಯಾಲಯ ಹುನಗುಂದ, ಜಿ: ಬಾಗಲಕೋಟ
ಮೊ. ೭೬೭೬೬೫೮೨೬೫